## ವಾರ್ತಾ ನಿಧಿ

ಸಂಘದ ಸದಸ್ಯರ ನಡುವೆ ಮುಖ್ಯಸಂಪರ್ಕ ಸೇತುವೆಯಾಗಿರುವ ಸಂಘದ ಚಟುವಟಿಕೆಗಳ ಮುಖವಾಣಿಯಾಗಿರುವ ಬಾಂಧವರ ಪ್ರತಿಭೆಗಳಿಗೆ ಒಂದು ಕನ್ನಡಿಯಂತಿರುವ ನಿಮ್ಮ 'ಸಂಕೇತಿ ವಾರ್ತಾ'ವನ್ನು ಸದೃಢಗೊಳಿಸಿ, ಗಟ್ಟಿಯಾಗಿ ತನ್ನ ಕಾಲಮೇಲೆ ನಿಲ್ಲುವಂತೆ ಮಾಡುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಬಾಂಧವರಿಂದ ಉದಾರ ಕೊಡುಗೆಗಳನ್ನು ನಿರೀಕ್ಷಿಸಲಾಗಿದೆ. ಮಾನ್ಯ ಬಾಂಧವರು ತಮ್ಮ ಉದಾರ ಮನಸ್ಸಿನ ಕೊಡುಗೆಗಳನ್ನು ಅಧಿಕ ಸಂಖ್ಯೆಯಲ್ಲಿ ನೀಡಿ ಈ ಔಚಿತ್ಯಪೂರ್ಣ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ಎರಡು ಪ್ರಕಾರದ ದಾನಿಗಳನ್ನು ಗುರುತಿಸಲಾಗುವುದು.

**ರೂ. 5,000/- ಕೊಡುಗೆ ನೀಡುವವರು**
**ಮಹಾಪೋಷಕರು**

**ರೂ. 1,000/- ಕೊಡುಗೆ ನೀಡುವವರು**
**ಪೋಷಕರು**

ದಾನಿಗಳ ಹೆಸರುಗಳನ್ನು ಪ್ರತಿ ತಿಂಗಳೂ 'ವಾರ್ತಾ'ದಲ್ಲಿ ಪ್ರಕಟಿಸಲಾಗುವುದು.




# ಸಂಕೇತಿ ವಾರ್ತಾ

ಬೆಟ್ಟದಪುರ ಸಂಕೇತಿ ಸಂಘದ ಮಾಸಪತ್ರಿಕೆ

ಶ್ರೀ ಸರ್ವಜಿತು ಸಂ॥ ಮಾಘ ಮಾಸ ಸಂಪುಟ - ೨೩

ಫೆಬ್ರವರಿ ೨೦೦೮ ಸಂಚಿಕೆ - ೦೨


# The marvel of brain

## Memory is a boon granted to humans

THE human brain is considered to be the most marvelous and mysterious organ. Its memory is sharp, remembers and recollects even decades-old events and reproduces the images instantly. It undergoes a triple state-consciousness, sub-consciousness and unconsciousness. It runs riot with synergised serotonin and adrenaline. If scrambled and corrupted, it plays havoc a la 'political brains'.

The West's love for the best Indian brains has resulted in a huge brain drain. The Intelligent are recognised only by their tribe but not by the dunderheads or dullards. And no 'reservation' about it.

The memory is a boon granted to the humans. Then why do politicians easily forget their promises

made before elections? Their brains are blessed with a 'selective amnesia' The mind-boggled, confused politicians often conduct 'brain-storming' sessions, end up in the Parliament with histrionics. Some of the MPs with bestirred brains and frothy mouths yell like hell and scurry into the well of the House where the hair-splitting dejected Speaker uses all his brain power to make peace.

The doctor's dictum is that the brain boosted by the Lallu-fame fodder functions finely. But when the 'left brain' is hurt, it affects the right side limbs and vice versa with debilitation or paralysis.

Coming to the brainy branch of political psychology, will the Left psyche out any time from now? Or will the anchorman Yechury, chanting 'Pathetha paavana Seetha Ram', abort it?

**







# ಅಧ್ಯಕ್ಷನುಡಿ

ನೂತನ ವರ್ಷದಲ್ಲಿ ನೂತನ ಕಾರ್ಯಕಾರಿ ಸಮಿತಿಯ ಪರವಾಗಿ ಬಾಂಧವರಿಗೆಲ್ಲ ನೂತನ ಶುಭ ಕಾಮನೆಗಳು. 27.01.2008ರಂದು ಬೆಂಗಳೂರಿನ ಗಾಯನ ಸಮಾಜದಲ್ಲಿ ನಡೆದ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಅವಿರೋಧವಾಗಿ ಆಯ್ಕೆಯಾದ ಹೊಸ ಸಮಿತಿಯನ್ನು ಪರಿಚಯಿಸಲಾಯಿತು. ಸಭೆಯ ನಂತರ ನಡೆದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ನನ್ನನ್ನು (ಎಂದರೆ ಎಂ. ನರಸಿಂಹನ್) ಮತ್ತೊಮ್ಮೆ ಅಧ್ಯಕ್ಷನನ್ನಾಗಿ ಆರಿಸಲಾಯಿತು. ಕಾರ್ಯದರ್ಶಿಯಾಗಿ ಶ್ರೀ ಎಸ್. ಸಿ. ಮಂಜುನಾಥ್ ಸಹ ಪುನರಾಯ್ಕೆ ಆಗಿದ್ದಾರೆ. (ಸಮಿತಿಯ ಸದಸ್ಯರ ಪಟ್ಟಿಯನ್ನು ಪ್ರತ್ಯೇಕವಾಗಿ ಕೊಡಲಾಗಿದೆ) ಬಾಂಧವರು ನನ್ನ ಹಾಗೂ ಸಮಿತಿಯ ಮೇಲೆ ಇರಿಸಿರುವ ಅಭಿಮಾನಕ್ಕೆ ಕೃತಜ್ಞನಾಗಿದ್ದೇನೆ. ನಾನು ಸರ್ವ ಸದಸ್ಯರ ಸಭೆಯಲ್ಲಿ ತಿಳಿಸಿದಂತೆ, ಜವಾಬ್ದಾರಿಯನ್ನು ಅದರಲ್ಲಿಯೂ ವೃದ್ಧಾಶ್ರಮದ ವ್ಯವಸ್ಥಿತ ಹೊಣೆಯನ್ನು ನಿರ್ವಹಿಸ ಬಯಸುತ್ತೇನೆ. ಹೊಸ ಆಲೋಚನೆಗಳುಳ್ಳ ಹೊಸ ನಾಯಕತ್ವವು ಸಂಘವನ್ನು ಮುನ್ನಡೆಸಲು ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬಹುದು.

ಸರ್ವ ಸದಸ್ಯರ ಸಭೆಯು ಯಶಸ್ವಿಯಾಗಿ ಕಲಾಪಗಳನ್ನು ನಡೆಸಿತು. ಸಭೆಯಲ್ಲಿ ಹಾಜರಾತಿ ಅಷ್ಟೇನೂ ತೃಪ್ತಿಕರವಾಗಿರಲಿಲ್ಲ. ಸದಸ್ಯ ಬಾಂಧವರು ವರ್ಷಕ್ಕೊಮ್ಮೆ ನಡೆಯುವ ಇಂತಹ ಸಭೆಗಳಲ್ಲಿ ಹೆಚ್ಚು ಆಸಕ್ತಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದು ಸಂಘಕ್ಕೂ, ಸಮಿತಿಗೂ, ಸದಸ್ಯರಿಗೂ ಒಳ್ಳೆಯದು ಅಲ್ಲವೆ ?

ಈ ವರ್ಷಕ್ಕೊಂದು ಸಂತಸದ ಆರಂಭ. ನಮ್ಮ ಸಂಘದ ಸದಸ್ಯರ ಸಂಖ್ಯೆ 2000 ದಾಟಿ 2008 ಆಗಿದೆ. ಬಾಂಧವರೆಲ್ಲರ ಅಭಿಮಾನ, ಆಸಕ್ತಿಗಳಿಂದ ಇದು ಹೀಗೇ ಬೆಳೆಯುತ್ತಿರಲಿ.

ಉತ್ಸಾಹೀ ಮಹಿಳೆಯರ ಸಂಘಟನೆಯಾದ ಸಂಕೇತಿ ಮಹಿಳಾ ಸಮಾಜವು 26.01.2008ರಂದು ಆಯೋಜಿಸಿದ್ದ ''ಸಾಂಸ್ಕೃತಿಕ ಸಂಜೆ'' ಕಾರ್ಯಕ್ರಮವು ಹಲವಾರು ವಿಶಿಷ್ಟತೆಗಳಿಂದ ರಸಿಕರ ಮೆಚ್ಚುಗೆಗೆ ಪಾತ್ರವಾಯಿತು. ಮಹಿಳಾ ಸಮಾಜದ ಪದಾಧಿಕಾರಿಗಳೆಲ್ಲ ನಮ್ಮ ಅಭಿನಂದನೆಗೆ ಅರ್ಹರು.

- ಎಂ. ನರಸಿಂಹನ್







# ಕಾರ್ಯದರ್ಶಿ ಕಾಲಂ

ಸಂಕೇತಿ ಬಂಧುಗಳಿಗೆಲ್ಲಾ ನಮಸ್ಕಾರಗಳು.

ಸಂಘದ ಅರವತ್ತೊಂದನೆಯ ಸರ್ವ ಸದಸ್ಯರ ಸಾಮಾನ್ಯ ಸಭೆಯು ಮುಕ್ತಾಯವಾಗಿದ್ದು ಸಭೆಯ ನಡವಳಿಕೆಗಳ ಸಂಕ್ಷಿಪ್ತ ವರದಿಯನ್ನು ಈ ಸಂಚಿಕೆಯಲ್ಲಿ ಕೊಡಲಾಗಿದೆ.

ಆಡಳಿತ ಸಮಿತಿಗೆ 11 ಜನ ಸದಸ್ಯರು ಅವಿರೋಧವಾಗಿ ಚುನಾಯಿತರಾಗಿದ್ದು ಮುಂದಿನ 2 ವರ್ಷಗಳಿಗೆ ಸಮಿತಿ ಸದಸ್ಯರು ನನ್ನನ್ನೇ ಮತ್ತೆ ಗೌ|| ಕಾರ್ಯದರ್ಶಿಯಾಗಿ ಆಯ್ಕೆ ಮಾಡಿದ್ದಾರೆ. ನನ್ನ ಮೇಲೆ ನಂಬಿಕೆ ಇರಿಸಿ, ನನ್ನನ್ನು ಆಯ್ಕೆ ಮಾಡಿದ ಎಲ್ಲಾ ಸಂಕೇತಿ ಬಂಧುಗಳಿಗೂ, ಅಧ್ಯಕ್ಷರಿಗೂ, ಸಮಿತಿ ಸದಸ್ಯರಿಗೂ ನಾನು ಆಭಾರಿಯಾಗಿದ್ದೇನೆ.

- ಎಸ್. ಸಿ. ಮಂಜುನಾಥ್

## ಬದಲಾದ ವಿಳಾಸಗಳ ಪಟ್ಟಿ ಲಭ್ಯ

15.01.2008 ರವರೆಗೆ ಪರಿಷ್ಕರಿಸಿದ ಬದಲಾದ ವಿಳಾಸ ಪಟ್ಟಿ ಮುದ್ರಿಕೆಯಾಗಿ ಲಭ್ಯವಾಗಿರುತ್ತದೆ. ಇದನ್ನು ಮೈಸೂರು ಕಛೇರಿ ಮತ್ತು ಬೆಂಗಳೂರು ಕಛೇರಿಗಳಲ್ಲಿ ಪಡೆಯಬಹುದು. ಇದರ ಬೆಲೆ ರೂ. 15/- ಮಾತ್ರ. ಇಡೀ ಪುಸ್ತಕದ ಬೆಲೆ ರೂ. 50/- ಮಾತ್ರ.

# ಶುಭ ಸಮಾಚಾರಗಳು

## ಗೃಹಪ್ರವೇಶ :

| ತಾರೀಖು | ಹೆಸರು |
|---|---|
| 04.11.07 | **ಶ್ರೀಮತಿ ವೆಂಕಟಲಕ್ಷ್ಮೀ ಮತ್ತು ಶ್ರೀ ಹೆಚ್. ವಿ. ಸೋಮಶೇಖರ್** |
| ಮೈಸೂರು | (ಹನಸೋಗೆ ವಿಶ್ವೇಶ್ವರಯ್ಯನವರ ಪುತ್ರ , ಬ್ಯಾಂಕ್ ಕಾಲೋನಿ) |

## ವಿವಾಹ ಮಹೋತ್ಸವ :

| ತಾರೀಖು | ವಧು | ವರ |
|---|---|---|
| 12.12.07 | **ಹಾ॥ಕುಂ॥ಶೋ॥ ಸ್ವರೂಪ** | **ಚಿ॥ ರಾ॥ ರಮೇಶ್** |
| ಬೆಂಗಳೂರು | (ಶ್ರೀಮತಿ ಹನಸೋಗೆ ನಾಗರತ್ನ ಮತ್ತು ಶ್ರೀ ಬಿ.ಎಸ್.ಶಾಮಣ್ಣ ಅವರ ಪುತ್ರಿ) | (ಶ್ರೀಮತಿ ಗೌರಮ್ಮ ಮತ್ತು ಶ್ರೀ ಕೆ. ನರಸಿಂಗರಾವ್ ಅವರ ಪುತ್ರ) |

## ಭೀಮರಥ ಶಾಂತಿ :

| ತಾರೀಖು | ಹೆಸರು |
|---|---|
| 03.02.08 | **ವೇಣುಗಾನ ವಿದ್ವಾನ್ ಶ್ರೀ ಬಿ. ಜಿ. ಶ್ರೀನಿವಾಸ್ (ಪಾಪು) ಅವರಿಗೆ** |
| ಬೆಂಗಳೂರು | **ಭೀಮರಥ ಶಾಂತಿ (70 ವರ್ಷ) ಯನ್ನು ಅವರ ಮಕ್ಕಳಾದ ಚಂದ್ರಮೌಳಿ. ಎಸ್. ಬೆಟ್ಟದಪುರ್ ಅವರು ನೆರವೇರಿಸಿದರು** |

## ಜನವರಿ ತಿಂಗಳಲ್ಲಿ ಸಂಘಕ್ಕೆ ಬಂದ ಕೊಡುಗೆಗಳು

## ಆಜೀವ ಸದಸ್ಯತ್ವ ರೂ. 100/-

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ನಾಗರಾಜ್. ಎಸ್. | ಮೈಸೂರು | 8566 | 1995 |
| ಗಾಯತ್ರಿ ಆರ್. ಎಸ್. | ಮೈಸೂರು | 8567 | 1996 |
| ವಿಶಾಲ್ ಸಚಿನ್ | ಬೆಂಗಳೂರು | 8568 | 1997 |
| ಪ್ರಾರ್ಥನಾ ವಿಶಾಲ್ | ಬೆಂಗಳೂರು | 8569 | 1998 |
| ಸೌಮ್ಯ ಎಸ್.ಎ. | ಬೆಂಗಳೂರು | 8570 | 1999 |





| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ರಮ್ಯ ಎಸ್.ಎ. | ಬೆಂಗಳೂರು | 8571 | 2000 |
| ವನಿತಾ ಬಾಲಸುಬ್ರಹ್ಮಣ್ಯ | ಮೈಸೂರು | 8575 | 2001 |
| ಭಾಗ್ಯವತಿ ದತ್ತಾತ್ರಿ | ಬೆಂಗಳೂರು | 8577 | 2002 |
| ಸತ್ಯಪ್ರಕಾಶ್‌ರಾವ್ ವೈ.ಎ. | ಬೆಂಗಳೂರು | 8583 | 2003 |
| ಸಾವಿತ್ರಿ ರಾಮಚಂದ್ರ | ಬೆಂಗಳೂರು | 8587 | 2004 |
| ಶ್ರೀಧರ ಶರ್ಮ ಹೆಚ್.ಆರ್. | ಬೆಂಗಳೂರು | 8588 | 2005 |
| ಜಯಶ್ರೀ ಶರ್ಮ | ಬೆಂಗಳೂರು | 8589 | 2006 |
| ಶ್ರೀ ವಲ್ಲೀಶ್ ಆರ್. ಎಸ್. | ಬೆಂಗಳೂರು | 8591 | 2007 |
| ಶ್ರೀ ವಾಗೀಶ ಆರ್.ಎಸ್. | ಬೆಂಗಳೂರು | 8592 | 2008 |

## ಸಭಾ ತಾಂಬೂಲಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಸುನೀಲ್ ವಿ. ಸುಬ್ರಹ್ಮಣ್ಯ | ಬೆಂಗಳೂರು | 8563 | 200.00 (ಮಗನ ಚೌಲೋಪನಯನ) |

## ಅಶಕ್ತ ಮಾಸಾಶನ ನಿಧಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಎಸ್.ಜಿ. ರಮೇಶ್ | ಬೆಂಗಳೂರು | 8562 | 1,000.00 |

## ವಾರ್ತಾ ಜಾಹೀರಾತು / ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ರತ್ನ ಸಂಕೇತಿ ಹೋಂ ಪ್ರಾಡಕ್ಟ್ಸ್ | ಬೆಂಗಳೂರು | 8572 | 600.00 |

## ವೃದ್ಧಾಶ್ರಮ ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಜಾ॥ ಆರ್. ಜಿ. ವೈದ್ಯನಾಥ (ರಿ.) | ಬೆಂಗಳೂರು | 8565 | 25,000.00 (ತಂದೆಯ ನೆನಪು) |

## ಹಾಸ್ಟೆಲ್ ಅನ್ನದಾನ ನಿಧಿಗೆ / ಸೇವೆ ಬಂದ ಕೊಡುಗೆಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಶಶಿಕಲಾ | ಬೆಂಗಳೂರು | 8573 | 400.00 (ಪತಿಯ ನೆನಪು) |
| ಆರ್. ವೆಂಕಟರಾಮ್ | ಬೆಂಗಳೂರು | 8574 | 500.00 (ತಾಯಿಯ ನೆನಪು) |
| ಸರಸ್ವತಿ ಅವಧಾನೀ | ಬೆಂಗಳೂರು | 8617 | 400.00 (ಕು\|\| ಗೌರಿಯ ನೆನಪು) |
| ಹೆಚ್.ಎನ್. ಜಗದೀಶ್ | ಮೈಸೂರು | 8619 | 501.00 (ದಿ\|\| ಎಸ್.ಆರ್. ಕುಮುದ ಅವರ ನೆನಪು) |

## ಜನವರಿ ತಿಂಗಳಲ್ಲಿ ನಡೆದ ಹಾಸ್ಟೆಲ್ ಅನ್ನದಾನ ಸೇವಾ :

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 30.11.07 ನವದೆಹಲಿ | ಜ್ಯೋತಿ ಶ್ರೀಧರ್ | ತಾಯಿ ಆರ್. ಎ. ನಾಗಲಕ್ಷ್ಮೀ |

ಕಾರಣಾಂತರಗಳಿಂದ ಇದರ ಪ್ರಕಟಣೆ ವಿಳಂಬವಾಗಿರುವುದರಿಂದ ಕ್ಷಮೆ ಇರಲಿ

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 01.01.08 ಯುಎಸ್‌ಎ | ಡಾ\|\| ಸುಬ್ಬರಾವ್ ಎಸ್.ಸಿ. | ತಂದೆ ಸಾಹುಕಾರ್ ಎಸ್ ಸಿ ಚೆನ್ನಪ್ಪಯ್ಯ |
| 01.01.08 ಬೆಂಗಳೂರು | ರಾಮಸ್ವಾಮಯ್ಯ ಹೆಚ್.ಎಸ್. | ತಂದೆ ಶಾನುಭೋಗ್ ಸುಬ್ಬರಾಯ |
| 01.01.08 ಮೈಸೂರು | ಸರಸ್ವತಿ ಕೆ. ಎನ್. ಗೌರಮ್ಮ, ನಾಗೇಶ್ | |
| 01.01.08 ಬೆಂಗಳೂರು | ಹೆಚ್. ವಿ. ಮಾಯಾ | |
| 02.01.08 ಬೆಂಗಳೂರು | ಶಕುಂತಲ ವೆಂಕಟಕೃಷ್ಣಪ್ಪ | ಆರ್.ವೆಂಕಟಸುಬ್ಬಯ್ಯ (ಪಿತಾಮಹ) |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 02.01.08 ಬೆಂಗಳೂರು | ಚಂದ್ರಶೇಖರ್ ಎಸ್.ಎನ್. | ತಂದೆ ನಾರಾಯಣ ಸ್ವಾಮಿ |
| 03.01.08 ಬೆಂಗಳೂರು | ರಾಮಸ್ವಾಮಿ ಬಿ. ಎಸ್. | ತಾಯಿ ಕಮಲಾ ಶ್ರೀನಿವಾಸಯ್ಯ |
| 06.01.08 ಬೆಂಗಳೂರು | ಚಂದ್ರಶೇಖರ್ ಮತ್ತು ಮಕ್ಕಳು | ಶಾರದಮ್ಮ |
| 06.01.08 ವಾರಣಾಸಿ | ಸುವರ್ಣಾ ಆರ್. ಎಸ್. | ತಾಯಿ ಪಾರ್ವತಮ್ಮ ಚಂದ್ರಶೇಖರಯ್ಯ |
| 06.01.08 ಬೆಂಗಳೂರು | ಶಾಮಣ್ಣ ಆರ್. ಎನ್. | ತಂದೆ ನಾರಣಪ್ಪ |
| 06.01.08 ಮಾಲೂರು | ಪ್ರಮೀಳಾ ಬಿ. ಎನ್., ನಾಗರಾಜ ನಾಗರಾಜ್ ಹೆಚ್.ಎನ್, ರಮೇಶ್ | ತಂದೆ ಹೆಚ್.ಎಸ್. ನರಸಿಂಹ ಮೂರ್ತಿ |
| 08.01.08 ಬೆಂಗಳೂರು | ನಟರಾಜ್. ವಿ. | ತಾಯಿ ಮೀನಾಕ್ಷಮ್ಮ |
| 08.01.08 ಬೆಂಗಳೂರು | ಹೇಮಲತಾ ಶ್ರೀವತ್ಸನ್, ನಟರಾಜ್ ಶ್ರೀಧರ್ | ತಂದೆ ಹೆಚ್.ಎಸ್. ಕೃಷ್ಣಪ್ಪ |
| 08.01.08 ಯುಎಸ್‌ಎ | ವೈದೇಹಿ ಶಿವಶಂಕರ್ | ಮಗ ರಾಮ ಶಿವಶಂಕರ್ |
| 10.01.08 ಬೆಂಗಳೂರು | ಶ್ರೀನಿವಾಸಮೂರ್ತಿ ಎಸ್.ಸಿ. | ತಾಯಿ ಸಾವಿತ್ರಮ್ಮ |
| 10.01.08 ಕೆನಡ | ದಿವಾಕರ್ ಆರ್.ಎ. | ತಂದೆ ಅನಂತ ಶ್ರೀನಿವಾಸಯ್ಯ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 11.01.08 ಬೆಂಗಳೂರು | ಲಲಿತಮ್ಮ ಕಾಲಭೈರವನ್ | ಎಸ್.ಎನ್ ಕಾಲಭೈರವನ್ ರವರ ಹುಟ್ಟುಹಬ್ಬ |
| 12.01.08 ಬಾಂಬೆ | ವೈದ್ಯನಾಥ ಆರ್.ಜಿ. | ತಂದೆ ಆರ್ ಎಸ್ ಗುಂಡು ರಾಮಯ್ಯ |
| 14.01.08 ಬೆಂಗಳೂರು | ಕೇಶವಮೂರ್ತಿ ಬಿ. ಆರ್. | ತಂದೆ |
| 14.01.08 ಬೆಂಗಳೂರು | ಸಾವಿತ್ರಿ ವಿಶ್ವನಾಥ್ | ಶ್ರೀಮತಿ ಪುಟ್ಟಮ್ಮ (ಪಿರಿಯಾಪಟ್ಟಣ) |
| 15.01.08 ಬಾಂಬೆ | ಡಾ|| ಶಾಮಸುಂದರ್ ಆರ್.ಕೆ. | ತಾಯಿ ವಿಶಾಲಾಕ್ಷೀ ಆನಂದರಾಮಯ್ಯ |
| 15.01.08 ಯುಎಸ್‌ಎ | ಕು|| ಚಂದ್ರಿಕಾ | ಆರ್.ಕೆ.ಶ್ರೀಕಂಠನ್ ರವರ ಹುಟ್ಟುಹಬ್ಬ |
| 15.01.08 ಮೈಸೂರು | ಬೆಟ್ಟದಪುರ ಸಂಕೇತಿ ಮಂಗಳ ಕಾರ್ಯ ಸಮಿತಿ | |
| 15.01.08 ಮುಂಬಯಿ | ದಿ ಬಾಂಬೆ ಸಂಕೇತಿ ಭಗಿನೀ ಸಮಾಜ | |
| 15.01.08 ಮೈಸೂರು | ಬಾಲಸುಬ್ರಹ್ಮಣ್ಯ ಎಸ್. | ಪತ್ನಿ ಪದ್ಮಿನಿ |
| 16.01.08 ಬೆಂಗಳೂರು | ಆರ್. ಶ್ರೀನಿವಾಸನ್ | ತಾಯಿ ಲಕ್ಷ್ಮೀದೇವಮ್ಮ |
| 17.01.08 ಬೆಂಗಳೂರು | ರಮೇಶ್ ಹೆಚ್.ಎಸ್. | ತಂದೆ ಹೆಚ್. ಎಸ್. ಸೂರ್ಯ ನಾರಾಯಣ |
| 18.01.08 ಬೆಂಗಳೂರು | ಲೆ. ಕರ್ನಲ್ ಬಿ.ವಿ.ಎಸ್. ರಾವ್ | ಮಲ್ಲಿಕಾರಾವ್‌ರವರ ಹುಟ್ಟುಹಬ್ಬ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 23.01.08 ಬೆಂಗಳೂರು | ಆರ್. ವೆಂಕಟರಾಮ್ | ತಾಯಿ ತಂಗಚ್ಚಮ್ಮ |
| 23.01.08 ಬೆಂಗಳೂರು | ವಿನೋದ ಎನ್. ಮೂರ್ತಿ | ತಂದೆ ಅರ್ಥಶಾಸ್ತ್ರ ವಿಶಾರದ ಡಾ|| ಆರ್. ಶಾಮಾ ಶಾಸ್ತ್ರಿ |
| 24.01.08 ಬೆಂಗಳೂರು | ಶಶಿಕಲಾ | ಪತಿ ರಘು |
| 25.01.08 ಹಾಸನ | ಸುಬ್ರಹ್ಮಣ್ಯ ಆರ್. | ತಂದೆ ರಂಗಸ್ವಾಮಿ ಆರ್.ಎಸ್. |
| 25.01.08 ಮೈಸೂರು | ಸಾವಿತ್ರಮ್ಮ | ಮಗ ಕೆ.ವಿ. ಅನಂತ ಸುಬ್ರಹ್ಮಣ್ಯ |
| 26.01.08 ಬೆಂಗಳೂರು | ಲಲಿತಾಂಬ ಬಿ.ಜಿ. | ಅವರ ಹುಟ್ಟುಹಬ್ಬ |
| 26.01.08 ಬೆಂಗಳೂರು | ಸುಬ್ರಹ್ಮಣ್ಯ ಆರ್.ಜಿ. | ತಂದೆ ಆರ್. ಗೋಪಾಲಯ್ಯ |
| 28.01.08 ಮೈಸೂರು | ನಾಗಮ್ಮ | ತಂದೆ ಎಂ.ಎಸ್.ವೆಂಕಟ ರಾಮಯ್ಯ |
| 30.01.08 ನವದೆಹಲಿ | ರಾಮಸ್ವಾಮಿ ಬಿ. ಎಸ್. | ತಂದೆ ಸೂರ್ಯನಾರಾಯಣ ಬಿ. ಎಸ್. |
| 31.01.08 ಬೆಂಗಳೂರು | ದೀಪಕ್ ಬಾಲಗಂಗಾಧರ | ತಂದೆ ಬಾಲಗಂಗಾಧರ |
| 31.01.08 ಬೆಂಗಳೂರು | ಸೂರ್ಯನಾರಾಯಣ ಆರ್.ಕೆ. | ಮಗಳು ಮೈಥಿಲಿ ಶಿವರಾಂ ಹುಟ್ಟುಹಬ್ಬ |

## ವಿಶೇಷ ಗೌರವಕ್ಕೆ ಪಾತ್ರರಾದ ಡಾ|| ಸಂಧ್ಯಾ ಅವಧಾನಿ



ನಮ್ಮ ಹೆಮ್ಮೆಯ ವೈದ್ಯೆಯೂ ಪ್ರತಿಭಾಶಾಲಿಯೂ ಆಗಿರುವ ಡಾ|| ಸಂಧ್ಯಾ ಅವಧಾನಿ ಅವರು ಅವರ ಕಾರ್ಯ ನಿರ್ವಹಣಾ ಸಂಸ್ಥೆಯಾದ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆಯ ವೈಸ್ ಡೀನ್ ಆಗಿ ಆಯ್ಕೆಯಾಗಿದ್ದಾರೆ. ಅವರ ಪತಿ ಡಾ|| ಗುರುಮೂರ್ತಿ ಎಸ್. ಆರ್. ಅವರೂ ನಮ್ಮ ಆತ್ಮೀಯ ಸದಸ್ಯರು. ಡಾ|| ಸಂಧ್ಯಾ ಅವರು ದಿ|| ಬಿ.ವಿ.ಟಿ. ಅವಧಾನಿ ಅವರ ಪುತ್ರಿ. ಕಮಲಾ ಅವಧಾನಿ ಫೌಂಡೇಷನ್‌ನನ್ನು ಅವರ ಸಹೋದರರೊಂದಿಗೆ ಸ್ಥಾಪಿಸಿ ಯುವ ಪೀಳಿಗೆಯವರಲ್ಲಿರುವ ಶಾಸ್ತ್ರೀಯ ಸಂಗೀತ ಪ್ರತಿಭೆಗೆ ನೀರೆರೆಯುವ ಅಪರೂಪದ ಕಾಯಕದಲ್ಲೂ ತೊಡಗಿಸಿಕೊಂಡಿರುವ ಡಾ|| ಸಂಧ್ಯಾ ಅವರಿಗೆ ಸಂಘದ ಹಾರ್ದಿಕ ಅಭಿನಂದನೆಗಳು.

---

## ಪ್ರತಿಭೆ

**ಚಿ|| ವಿನಾಯಕ ಆತ್ರೇಯ. ಬಿ. ಆರ್.**

**2ನೇ ತರಗತಿ, ಪ್ರಶಾಂತಿ ಹಿರಿಯ ಪ್ರಾಥಮಿಕ ಶಾಲೆ**

ಸಿರಿಗನ್ನಡ ಪ್ರತಿಭಾ ಪರೀಕ್ಷೆಯಲ್ಲಿ ಶಿವಮೊಗ್ಗ ಜಿಲ್ಲೆಗೇ ಪ್ರಥಮ ರ್‍ಯಾಂಕ್ ಬಂದಿದ್ದಾನೆ

ತಂದೆ : ಬಿ. ಎಸ್. ರವಿಶಂಕರ್

ತಾಯಿ : ಆರ್. ಎನ್. ಸುಮಾ

ಅಜ್ಜಂದಿರು : ಬಿ. ವಿ. ಶ್ರೀಕಂಠ ಮತ್ತು ಬಿ. ಎಸ್. ನಾರಾಯಣಸ್ವಾಮಿ

ಅಜ್ಜಿಯರು : ಬಿ. ಎಸ್. ವೇದಾ ಮತ್ತು ಆರ್. ವಿ. ವಸಂತಲಕ್ಷ್ಮೀ

**ಚಿ||ಗೆ ಸಂಘದ ಅಭಿನಂದನೆಗಳು**





## ಬೆಂಗಳೂರು ಸಂಕೇತಿ ಮಹಿಳಾ ಸಮಾಜ

## ಮಾಸಿಕ ಮಿಲನ ಸಭೆ

ದಿನಾಂಕ 05.01.08ರಂದು ಬೆಳಗ್ಗೆ 11 ಗಂಟೆಗೆ ಶಂಕರಪುರಂನಲ್ಲಿರುವ 'ತೇಜಸ್ವಿನೀ ಟ್ರಸ್ಟ್'ನಲ್ಲಿ ಸದಸ್ಯೆಯರಿಗೆ ಸಿಹಿ ಮತ್ತು ಖಾರ ತಿಂಡಿಗಳ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

**ವಿಷಯ : ಖಾರ : ಯಾವುದೇ ರೀತಿ ಪರೋಟ**

**ಸಿಹಿ : ತರಕಾರಿಯನ್ನು ಉಪಯೋಗಿಸಿ ಸಿಹಿ ತಿಂಡಿ**

ಬಹಳ ಹುರುಪಿನಿಂದ ಬಹಳಷ್ಟು ಜನ ಸದಸ್ಯೆಯರು ಬಗೆ ಬಗೆಯಾದ ಸಿಹಿ ಮತ್ತು ಖಾರ ತಿಂಡಿಗಳನ್ನು ಮಾಡಿಕೊಂಡು ಬಂದಿದ್ದರು. ಅಷ್ಟೂ ಜನಕ್ಕೂ ಜಾಗದ ವ್ಯವಸ್ಥೆ ಮಾಡುವುದೇ ಕಷ್ಟವಾದಂತೆನಿಸಿತು ಎಂದರೆ ಅತಿಶಯೋಕ್ತಿ ಆಗಲಾರದು. ಆದರೂ ಸದಸ್ಯೆಯರ ಉತ್ಸಾಹಕ್ಕೆ ಭಂಗ ತರಬಾರದೆಂದು ಪ್ರೋತ್ಸಾಹಿಸಿದೆವು. ಈ ಅಡುಗೆ ಸ್ಪರ್ಧೆಗೆ ತೀರ್ಪುಗಾರರಾಗಿ ಶ್ರೀಮತಿಯರಾದ ಮಧುಶ್ರೀ ಮತ್ತು ರೋಹಿಣಿ ಅವರುಗಳು ಬಂದಿದ್ದರು. ''ಬಹಳ ಕಷ್ಟಪಟ್ಟು ತೀರ್ಪನ್ನು ಕೊಡಬೇಕಾಯಿತು. ಯಾಕೆಂದರೆ ಅಷ್ಟು ಬಗೆಯ ತಿಂಡಿಗಳಿದ್ದವು'' ಎಂದರು.

ಈ ನಮ್ಮ ಕಾರ್ಯಕ್ರಮಕ್ಕೆ ತೇಜಸ್ವಿನೀ ಟ್ರಸ್ಟ್‌ನವರು ನಮಗೆ ಉಚಿತವಾಗಿ ಆ ಸ್ಥಳವನ್ನು ಬಿಟ್ಟುಕೊಟ್ಟಿದ್ದರು. ಅವರ ಈ ಸಹಾಯಕ್ಕೆ ಸಂಘವು ಆಭಾರಿಯಾಗಿದೆ.

**-: ಅಡುಗೆ ಸ್ಪರ್ಧೆಯ ವಿಜೇತರುಗಳು :-**

| | I | II | III | I Con. | II Con. |
|---|---|---|---|---|---|
| ಸಿಹಿ : | ಯಶೋದಮ್ಮ | ನಳಿನಿ | ಪ್ರಾರ್ಥನಾ | ಶೋಭಾಪೃಥ್ವಿರಾಜ್ | ಯಶೋದಮ್ಮ |
| ಖಾರ : | ಸಾವಿತ್ರಿರಮೇಶ್ | ಶಾಂತಲಾ | ಗೀತಾಮೂರ್ತಿ | ಗೀತಾ ಬಿ.ಜಿ.ಎಸ್. | ವೀಣಾ. ಕೆ. |

ವಿಜೇತರಿಗೆ ಬಹುಮಾನಗಳನ್ನು ಜನವರಿ 26ರ 'ಸಾಂಸ್ಕೃತಿಕ ಸಂಜೆ ' ಕಾರ್ಯಕ್ರಮದಲ್ಲಿ ನೀಡಲಾಗುವುದೆಂದು ತಿಳಿಸಲಾಯಿತು.

ಅಂದಿನ ಆತಿಥೇಯರುಗಳು : ಶ್ರೀಮತಿಯರಾದ ವನಿತಾ, ಸುನೀತಾ, ಲೀಲ, ಮಂಜುಳ, ಗಿರಿಜಾ, ಸುಧಾ, ವಿಜಯ ಮತ್ತು ಯಶೋದ ಅವರುಗಳು.

ಹಾಗೆಯೇ **Global Sales India**ದವರಿಂದ **Snackmagic** ಮತ್ತು **Induction Cooker**ನ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಲಾಗಿತ್ತು.

ರು. ಕೃ. ಗೀತಾಮಣಿ
ಗೌ|| ಕಾರ್ಯದರ್ಶಿ
ದೂ : 26695657

# ತಾ|| 27.01.2008ರಂದು ನಡೆದ ಸಂಘದ ಅರವತ್ತೊಂದನೆಯ ಸರ್ವಸದಸ್ಯರ ಸಾಮಾನ್ಯ ಸಭೆಯ ಸಂಕ್ಷಿಪ್ತ ವರದಿ

ದಿನಾಂಕ 27.01.08ರಂದು ಬೆಂಗಳೂರಿನ ಕೆ. ಆರ್. ರಸ್ತೆಯ ಗಾಯನ ಸಮಾಜದಲ್ಲಿ ಸಂಘದ ಅರವತ್ತೊಂದನೆಯ ಸರ್ವ ಸದಸ್ಯರ ಸಾಮಾನ್ಯ ಸಭೆಯು ನಡೆಯಿತು.

ಬೆಳಿಗ್ಗೆ 10.30ಕ್ಕೆ ಸರಿಯಾಗಿ ಬೆಂಗಳೂರು ಶಾಖೆಯ ಕಾರ್ಯದರ್ಶಿಯವರಾದ ಶ್ರೀ ಬಿ. ಆರ್. ನರಸಿಂಹಮೂರ್ತಿಯವರು ಅಧ್ಯಕ್ಷರನ್ನು ಮತ್ತಿತರ ಸಂಘದ ಪದಾಧಿಕಾರಿಗಳನ್ನೂ, ಆಡಳಿತ ಸಮಿತಿ ಸದಸ್ಯರನ್ನು ವೇದಿಕೆಗೆ ಆಹ್ವಾನಿಸಿದರು.

ಎಲ್ಲರೂ ಆಸೀನರಾದನಂತರ, ಶ್ರೀ ಮಲ್ಲಿಕಾರ್ಜುನ ವೇದ ಪಾಠ ಶಾಲೆಯ ವಿದ್ಯಾರ್ಥಿಗಳ ಸುಶ್ರಾವ್ಯವಾದ ವೇದಘೋಷದಿಂದ ಕಾರ್ಯಕ್ರಮ ಪ್ರಾರಂಭವಾಯಿತು.

ಶ್ರೀಮತಿಯರಾದ ವನಿತಾ ಮತ್ತು ಸುನೀತಾರವರಿಂದ ಭಕ್ತಿಭಾವ ಪೂರ್ಣವಾದ ಗಣೇಶನ ಪ್ರಾರ್ಥನೆ ನಡೆಯಿತು.

ಕಳೆದ ಸಾಲಿನಲ್ಲಿ ನಮ್ಮನ್ನಗಲಿದ ಸಂಕೇತಿ ಬಂಧುಗಳ ಆತ್ಮ ಶಾಂತಿಗಾಗಿ ಮೌನ ಪ್ರಾರ್ಥನೆಯೂ ಆಯಿತು.

ಸಂಘದ ಉಪಾಧ್ಯಕ್ಷೆ ಶ್ರೀಮತಿ ಆರ್. ವಿ. ವಸಂತಲಕ್ಷ್ಮಿಯವರು ಕಾರ್ಯಕ್ರಮಕ್ಕೆ ಎಲ್ಲರನ್ನೂ ಸ್ವಾಗತಿಸಿದರು.

ಸ್ವಾಗತ ಭಾಷಣದ ನಂತರ ಗೌ|| ಕಾರ್ಯದರ್ಶಿ ಶ್ರೀ ಎಸ್. ಸಿ. ಮಂಜುನಾಥ್‌ರವರು ಸರ್ವಸದಸ್ಯರ ಸಾಮಾನ್ಯ ಸಭೆಯ ಸೂಚನಾ ಪ್ರಕಟಣೆಯನ್ನು ಓದಿ ದಾಖಲಿಸಿದರು.

ಸಾಂಪ್ರದಾಯಿಕವಾದ ವಾರ್ಷಿಕ ವರದಿ ಆಗಲೇ ಎಲ್ಲರ ಬಳಿಯೂ ಇದ್ದುದರಿಂದ ಓದುವ ಅವಶ್ಯಕತೆ ಇಲ್ಲವೆಂಬ ಸರ್ವಸದಸ್ಯರ ಆಣತಿಯ ಮೇಲೆ ಈ ಕೆಳಗಿನ ಒಂದೆರಡು ಮುಖ್ಯ ಅಂಶಗಳನ್ನು ಮಾತ್ರ ಕಾರ್ಯದರ್ಶಿಯವರು ಹೇಳಿದರು.

1. ಸಂಘದ ಸದಸ್ಯರ ಸಂಖ್ಯೆ 2000 ಸಂಖ್ಯೆಯನ್ನು ದಾಟಿ 2001 ಆಗಿರುವುದು ಅತ್ಯಂತ ಹರ್ಷದಾಯಕ.





2. ಮೈಸೂರಿನ ಶ್ರೀ ಹೆಚ್. ಎನ್. ವೆಂಕಟೇಶ ಅವರ ಪರಿಶ್ರಮದಿಂದ ಮೈಸೂರಿನ ಕಲ್ಯಾಣ ಮಂಟಪದ ಖಾಲಿ ನಿವೇಶನದಲ್ಲಿ ಸ್ವಲ್ಪ ಸ್ಥಳವನ್ನು ಬಿ.ಎಸ್.ಎನ್.ಎಲ್.ನವರು ಬಾಡಿಗೆಗೆ ತೆಗೆದುಕೊಂಡಿದ್ದು 5 ವರ್ಷಗಳವರೆಗೆ ತಿಂಗಳಿಗೆ ರೂ. 7,500/– ನಿರಂತರ ಆದಾಯ ಸಂಘಕ್ಕೆ ದೊರಕುವಂತಾಗಿದೆ.

3. ಬೆಂಗಳೂರಿನ ವೃದ್ಧಾಶ್ರಮದ ಕನಸು ಸಾಕಾರಗೊಳ್ಳುವ ದಿನಗಳು ಹತ್ತಿರವಾಗಿರುವುದು.

ಈ ವರದಿ ಮುಗಿದನಂತರ ಕಳೆದ ಸಾಲಿನ ಲೆಕ್ಕ ಪತ್ರಗಳನ್ನು ಚರ್ಚೆ ಮತ್ತು ಅನುಮೋದಿಸಲು ಸಭೆಯ ಮುಂದಿಡಲಾಯಿತು. ಗ್ರಾಮಾಂತರ ಸಂಘದ ಗೌ|| ಕಾರ್ಯದರ್ಶಿ ಶ್ರೀ ಬಿ. ಎಸ್. ಅನಂತಕೃಷ್ಣಪ್ಪ ಲೆಕ್ಕ ಪತ್ರಗಳಲ್ಲಿ ಯಾವ ಅನುಮಾನವೂ ಇಲ್ಲದ ಕಾರಣ ಒಪ್ಪಿಕೊಳ್ಳಬಹುದೆಂದು ಸೂಚಿಸಿದರು.

ಈ ಸಂದರ್ಭದಲ್ಲಿ ಶ್ರೀ ಹೆಚ್. ಎಸ್. ಅಶ್ವತ್ಥನಾರಾಯಣ ಅವರು ಮಾತನಾಡಿ, ಅವರು ಸಂಘಕ್ಕೆ ದಾನವಾಗಿ ಕೊಟ್ಟಿರುವ ಹಣವನ್ನು ಪ್ರತಿ ತಿಂಗಳು ಪ್ರತ್ಯೇಕವಾಗಿ ತೋರಿಸುತ್ತಿಲ್ಲ. ಈ ಬಗ್ಗೆ 2 ವರ್ಷದ ಹಿಂದೆಯೂ ಸಭೆಯಲ್ಲಿ ಚರ್ಚೆಯಾಗಿ ಯಾವುದೇ ಪ್ರಯೋಜನವಾಗಿಲ್ಲ ಎಂದು ಆಕ್ಷೇಪಿಸಿದರು. ಆಗ ಅಧ್ಯಕ್ಷರು ಲೆಕ್ಕ ಪತ್ರಗಳ ಮೇಲಿನ ಚರ್ಚೆ ಮುಗಿದ ನಂತರ ತಮ್ಮ ಪ್ರಶ್ನೆಗೆ ಉತ್ತರಿಸುತ್ತೇನೆಂದು ಹೇಳಲಾಗಿ, ಲೆಕ್ಕ ಪತ್ರದ ಮೇಲಿನ ಚರ್ಚೆ ಮುಂದುವರಿದು, ಶ್ರೀ ಅನಂತ ಕೃಷ್ಣಪ್ಪನವರ ಲೆಕ್ಕ ಪತ್ರವನ್ನು ಒಪ್ಪಿಕೊಳ್ಳಬಹುದೆಂಬ ಸೂಚನೆಯನ್ನು ಶ್ರೀ ಬಿ. ಆರ್. ನರಸಿಂಹಮೂರ್ತಿ, ಶ್ರೀ ಬಿ.ಎನ್.ವಿ., ಶ್ರೀ ಕಾಶೀಪತಿಯವರೇ ಮುಂತಾದ ಗಣ್ಯರು ಅನುಮೋದಿಸಲಾಗಿ ಕಳೆದ ವರ್ಷದ ಆದಾಯ ವೆಚ್ಚವೇ ಮುಂತಾದ ಲೆಕ್ಕ ಪತ್ರಗಳನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ಇದಾದನಂತರ ಅಧ್ಯಕ್ಷರು ಶ್ರೀ ಅಶ್ವತ್ಥನಾರಾಯಣರ ಪ್ರಶ್ನೆಗೆ ಉತ್ತರಿಸುತ್ತಾ, ಶ್ರೀ ಅಶ್ವತ್ಥ ಅವರು ಕೇವಲ ಅರ್ಧ ವಿಷಯವನ್ನು ಮಾತ್ರ ಹೇಳಿ, ಅವರು ಸಂಘಕ್ಕೆ ದಾನವಾಗಿ ಕೊಟ್ಟ ಹಣವನ್ನು ವಕೀಲರ ಮೂಲಕ ಹಿಂತಿರುಗಿಸಲು ಕೇಳಿದ ವಿಷಯವನ್ನು ಮರೆಮಾಚಿದ್ದಾರೆ ಎಂದು ತಿಳಿಸಿ, ತಾವು ಹಣ ಹಿಂತಿರುಗಿಸಲು ಕೇಳಿದ್ದರಿಂದ ಈ ದಾನದ ಮೊತ್ತ ಈ ಸಲದ ಬ್ಯಾಲೆನ್ಸ್ ಷೀಟ್‌ನಲ್ಲಿ ಬಂದಿಲ್ಲ. ಈಗಲೂ ತಾವು ಒಪ್ಪುವುದಾದರೆ, ಸಂಘದ ಲೇವಾದೇವಿ ಸಂಸ್ಥೆಯಲ್ಲದ ಕಾರಣ ಕೊಟ್ಟಿರುವ ಡಾಲರ್ ಮೊತ್ತಕ್ಕೆ ತಾವು ಕೊಟ್ಟ ದಿನಾಂಕದಂದು ಯಾವ ಬೆಲೆ ಇತ್ತೋ ಆ ಮೊಬಲಗನ್ನು ಈ ದಿನವೂ ತಮಗೆ ಹಿಂತಿರುಗಿಸಲು ಸಂಘ ಸಿದ್ಧವಿದೆ. ಅಥವಾ ಸಂಘದ ಅಭಿಪ್ರಾಯಕ್ಕೆ ತಾವೂ ಬದ್ಧರಾಗಿರುವುದಾದರೆ, ಈ

ಮೊತ್ತವನ್ನು ಸಂಘದಲ್ಲೇ ಉಳಿಸಿಕೊಂಡು ವಾರ್ಷಿಕವಾಗಿ ಬ್ಯಾಲೆನ್ಸ್ ಷೀಟ್‌ನಲ್ಲಿ ತೋರಿಸುವುದಾಗಿ ಹೇಳಿದರು. ಈ ಮಾತಿಗೆ ಶ್ರೀ ಅಶ್ವತ್ಥನಾರಾಯಣರವರು ಒಪ್ಪಿ ಇನ್ನುಮುಂದೆ ಈ ವಿಷಯ ಚರ್ಚಿಸುವುದಿಲ್ಲವೆಂದು ಆಶ್ವಾಸಿಸಿದರು.

ಈ ರೀತಿಯಲ್ಲಿ ನಡೆದ ಬಿಸಿ ಚರ್ಚೆಯ ಕಾವೇರಿದ ವಾತಾವರಣವನ್ನು ತಿಳಿಗೊಳಿಸುವುದಕ್ಕಾಗಿ ನಮ್ಮವರೇ ಆದ ಶ್ರೀ ಆಶುತೋಶರವರ ಮಿಮಿಕ್ರಿ ಕಾರ್ಯಕ್ರಮ ಎಲ್ಲರನ್ನೂ ನಗೆಗಡಲಿನಲ್ಲಿ ಮುಳುಗಿಸಿತು.

ಸಭೆಯ ಮುಂದಿನ ಭಾಗದಲ್ಲಿ ಕಾರ್ಯದರ್ಶಿಯವರು ಮಾತನಾಡಿ ''ಕಲ್ಯಾಣಮಂಟಪದ ಹೆಚ್ಚಿನ ಆದಾಯದ ಬಗ್ಗೆ ಮತ್ತು ವಿದ್ಯಾರ್ಥಿ ನಿಲಯದಲ್ಲಿ ಸಂಕೇತಿ ವಿದ್ಯಾರ್ಥಿಗಳೇ ಇಲ್ಲದಿರುವ ಕಾರಣ'' – ಇವುಗಳ ಬಗ್ಗೆ ಚರ್ಚೆಗೆ ಆಹ್ವಾನಿಸಿದರು.

ಈ ಚರ್ಚೆಯಲ್ಲಿ ಪೂರ್ವಭಾಯಿಯಾಗಿ ತಿಳಿಸಿದ್ದ ಶ್ರೀ ಚಂದ್ರಶೇಖರ ಎಸ್.ಸಿ.ರವರು ಆದಾಯ ಹೆಚ್ಚಿಸಲು Build, Operate & Transfer ಎಂಬ ಉತ್ತಮ ರೀತಿಯ ಕಾರ್ಯತಂತ್ರವನ್ನು ಉಪಯೋಗಿಸಿ ಒಂದು ಆಧುನಿಕ ಕಲ್ಯಾಣ ಮಂಟಪವನ್ನು ನಿರ್ಮಿಸುವುದು ಸೂಕ್ತ ಎಂದರು. ಶ್ರೀ ಬಿ. ಆರ್. ನರಸಿಂಹಮೂರ್ತಿಯವರು ಒಂದು ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟಬಹುದು ಎಂದರು.

ಸಂಘದ ಮಾಜಿ ಖಜಾಂಚಿಗಳೂ, ಅ.ಕ.ಬ್ರಾ.ಮ.ಸಭಾದ ಮಾಜಿ ಅಧ್ಯಕ್ಷರೂ ಆದ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರವರು ಮಾತನಾಡಿ 2000 ಸದಸ್ಯರಿರುವ ಸಂಘದ ಸರ್ವ ಸದಸ್ಯರ ಸಭೆಗೆ ಅತಿ ಕಡಿಮೆ ಹಾಜರಾತಿ ಇರುವುದು ಅತ್ಯಂತ ದುರದೃಷ್ಟಕರ. ಇದು ಸದಸ್ಯರಿಗೆ ಸಂಘದ ಮೇಲಿನ ಅಭಿಮಾನ ಶೂನ್ಯತೆಯನ್ನು ತೋರಿಸುತ್ತದೆ ಎಂದು ಹೇಳಿ, ನಮ್ಮ ಹಿರಿಯರು ಯಾವ ಘನ ಉದ್ದೇಶದಿಂದ ಈ ಕಲ್ಯಾಣ ಮಂಟಪವನ್ನು ಪ್ರಾರಂಭಿಸಿದರು ಎಂಬುದನ್ನು ಚಿಂತಿಸಿ, ಲಾಭ ನಷ್ಟದ ಬಗ್ಗೆ ತಲೆ ಕೆಡಿಸಿಕೊಳ್ಳದೆ ಇನ್ನೂ ಕೆಲವುಕಾಲ ಹಾಗೇ ನಡೆಸಿಕೊಂಡು ಹೋಗುವುದು ಉಚಿತ ಎಂದರು.

ನಂತರ ಮಾತನಾಡಿದ ಶ್ರೀ ಕಾಶೀಪತಿಯವರೂ ಬಹುತೇಕ ಇದೇ ಅಭಿಪ್ರಾಯವನ್ನು ನೀಡಿದರು.

ಶ್ರೀ ಅನಂತಕೃಷ್ಣಪ್ಪನವರು ''ನಮ್ಮ ಮೂಲಸ್ಥಳವಾದ ಬೆಟ್ಟದಪುರವನ್ನು ಕಡೆಗಣಿಸುತ್ತಿದ್ದೀರಿ. ಕಡೇಪಕ್ಷ ಈ ವರ್ಷದ ರಥೋತ್ಸವಕ್ಕೆ ಬನ್ನಿ'' ಎಂದು ಆಹ್ವಾನಿಸಿ, ಕಲ್ಯಾಣ ಮಂಟಪದ ಬಗ್ಗೆ ಸೂಕ್ತವಾದ ತೀರ್ಮಾನ ತೆಗೆದುಕೊಳ್ಳಿ ಎಂದರು.





ಡಾ॥ ಹೆಚ್. ಎನ್. ಸುರೇಶ್‌ರವರು ಹಲವಾರು ಅಂಕಿ ಅಂಶಗಳನ್ನು ನೀಡಿ ಕಲ್ಯಾಣ ಮಂಟಪ ಲಾಭದಲ್ಲೇ ನಡೆಯುತ್ತಿದೆ ಎಂದು ತಿಳಿಸಿದರು.

ಆದರೆ ಈ ಎಲ್ಲಾ ಅಂಕಿ ಅಂಶಗಳು ಕಾರ್ಯದರ್ಶಿಯವರಲ್ಲಿ ಇದ್ದು, ಡಾ॥ ಹೆಚ್. ಎನ್. ಸುರೇಶ್‌ರವರು ಸವಕಳಿ ಮೊತ್ತವನ್ನು ಲೆಕ್ಕಕ್ಕೆ ತೆಗೆದುಕೊಳ್ಳದ ಕಾರಣ ಲಾಭದಂತೆ ಕಾಣುತ್ತದೆ ಎಂದರು.

ಸಭೆಯಲ್ಲಿ ಇತರ ಯಾರೂ ಈ ಬಗ್ಗೆ ಮಾತನಾಡದ ಕಾರಣ, ಶ್ರೀ ಬಿ.ಎನ್.ವಿ.ಯವರ ಅಭಿಪ್ರಾಯವಾದ ಸಧ್ಯಕ್ಕೆ ಲಾಭ ನಷ್ಟದ ಬಗ್ಗೆ ಹೆಚ್ಚು ಚಿಂತಿಸದೆ ಹಾಗೇ ನಡೆಸಿಕೊಂಡು ಹೋಗುವ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

ಈ ಎಲ್ಲಾ ಚರ್ಚೆಯೂ ಮುಗಿದನಂತರ ಅಧ್ಯಕ್ಷರು ಮಾತನಾಡಿ, ಸಂಘದ ಕನಸಾದ ವೃದ್ಧಾಶ್ರಮದ ಕಟ್ಟಡದ ನಕ್ಷೆಯನ್ನು ಬೆಂಗಳೂರು ಮಹಾನಗರ ಸಭೆ ಅನುಮೋದಿಸಿದ್ದು ಅತಿ ಶೀಘ್ರದಲ್ಲೇ ಕಟ್ಟಡದ ಕಾಮಗಾರಿ ಪ್ರಾರಂಭವಾಗಲಿದೆ ಎಂದು ಹೇಳಿದರು.

ಈ ವರ್ಷ ಆಡಳಿತ ಸಮಿತಿ ಚುನಾವಣೆಗೆ ಕೇವಲ 12 ಜನ ಸ್ಪರ್ಧಿಸಿದ್ದು, ಹೊಸಬರು ಯಾರೂ ಬರದೇ ಇರುವುದು ಬಹಳ ದುರದೃಷ್ಟಕರ ಎಂಬ ಶ್ರೀ ಬಿ.ಎನ್.ವಿ.ಸುಬ್ರಹ್ಮಣ್ಯ ಅವರ ಮಾತನ್ನು ಅಧ್ಯಕ್ಷರೂ ಅನುಮೋದಿಸಿ ಮುಂದಿನ ದಿನಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬರುವಂತಾಗಲಿ ಎಂದು ಆಶಿಸಿದರು. ಸಂಘವೂ ಈಗ ಬೆಳೆಯುತ್ತಿದ್ದು, ನಮ್ಮ ಠೇವಣಿ ಹಣವೇ ರೂ. 50 ಲಕ್ಷ ಮೀರಿದ್ದು, ಹೆಚ್ಚು ಸದಸ್ಯರು ಆಡಳಿತದಲ್ಲಿ ಆಸಕ್ತಿ ವಹಿಸುವುದು ಸೂಕ್ತ ಎಂದು ತಿಳಿಸಿದರು.

ಇದಾದನಂತರ ನಮ್ಮ ಸಂಘದ ಹೆಮ್ಮೆಯ ಪ್ರತಿಭಾವಂತ ಮಕ್ಕಳನ್ನು ಸನ್ಮಾನಿಸಲಾಯಿತು. ಈ ವರ್ಷ ಎಸ್.ಎಸ್.ಎಲ್.ಸಿ.ಯಲ್ಲಿ ಅತಿ ಹೆಚ್ಚು ಅಂದರೆ 16 ವಿದ್ಯಾರ್ಥಿಗಳು **Distinction** ಪಡೆದಿದ್ದು, 7ನೇ ತರಗತಿ, ಪಿ.ಯು.ಸಿ., ಬಿ.ಎಸ್.ಸಿ., ಬಿ.ಇ., ಎಂ.ಟೆಕ್ ಮತ್ತು ಪಿ.ಹೆಚ್‌ಡಿ ಪಡೆದ ಪ್ರತಿಭಾವಂತರನ್ನೂ ಸನ್ಮಾನಿಸಿದ್ದು ಅತಿ ಹೆಮ್ಮೆಯ ವಿಷಯ.

ಇದಾದನಂತರ ಕಾರ್ಯದರ್ಶಿಯವರು ಮಾತನಾಡಿ, ಈ ದಿವಸ ಚುನಾವಣೆ ನಡೆಯಬೇಕಾಗಿದ್ದು, ಕೇವಲ 12 ಜನ ಅಭ್ಯರ್ಥಿಗಳು ಚುನಾವಣೆಗೆ ಸ್ಪರ್ಧಿಸಿದ್ದು, ಶ್ರೀ ಹೆಚ್. ವಿ. ತೇಜನಾಗ್‌ರವರು ಸ್ವಪ್ರೇರಣೆಯಿಂದ ಅವರ ನಾಮಾಂಕಿತವನ್ನು ಹಿಂದೆ ಪಡೆದರಾದ ಕಾರಣ ಉಳಿದ 11 ಜನ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆಂದು ಹೇಳಿದರು. ಹಾಗೂ ಮುಂದಿನ ಸಮಿತಿಗೆ ಆಯ್ಕೆಯಾದ ಎಲ್ಲಾ 11 ಜನ ಸದಸ್ಯರನ್ನೂ ಸಭೆಗೆ ಪರಿಚಯಿಸಿದರು.

**ಸಭೆಗೆ ಗೌರವಾನ್ವಿತ ಅತಿಥಿಯಾಗಿ 'ಸಂಕೇತಿ ಸಂಗಮ'ದ ಶ್ರೀ ರಾಜಾರಾಮ ಮೂರ್ತಿಯವರು ನಮ್ಮ ಸಂಘದ ಮಾಜಿ ಕಾರ್ಯದರ್ಶಿಗಳಾದ ಶ್ರೀ ಆರ್. ಎಸ್. ಭಾಸ್ಕರ ಅವಧಾನಿಗಳ ಜೊತೆಯಲ್ಲಿ ಆಗಮಿಸಿದ್ದು ಅವರನ್ನು ಸಭೆಯನ್ನು ಉದ್ದೇಶಿಸಿ ಒಂದೆರಡು ಮಾತನಾಡಲು ಕೇಳಿಕೊಳ್ಳಲಾಯಿತು.**

**ಸಭೆಗೆ ಸದಸ್ಯರ ಅತಿ ಕಡಿಮೆ ಹಾಜರಾತಿಯ ಬಗ್ಗೆ ಮಾತನಾಡಿ, ಎಲ್ಲಾ ಸಂಘಗಳಲ್ಲೂ ಇದೇರೀತಿ ಇರುವುದರಿಂದ ಇದರ ಬಗ್ಗೆ ಹೆಚ್ಚು ಚಿಂತಿಸಬೇಕಿಲ್ಲವೆಂದು ಹೇಳಿದರು. ಮಾತನ್ನು ಮುಂದುವರೆಸಿ, ಉಭಯ ಸಂಕೇತಿ ಸಂಘಗಳ ಮಿಲನದ ಬಗ್ಗೆ ಹೇಳಿ, ಸಾಮಾಜಿಕವಾಗಿ ಆಗಲೇ ಎಲ್ಲರೂ ಒಂದಾಗಿದ್ದು, ಸಂಘಗಳು ಮಾತ್ರ ಬೇರೆಯಿರುವುದು ಸರಿಯಲ್ಲ. ಈ ಬಗ್ಗೆ ಉಭಯ ಸಂಕೇತಿಗಳು ಚಿಂತಿಸಬೇಕೆಂದರು.**

**ಕಡೆಯಲ್ಲಿ ಸಂಘದ ಸಹಕಾರ್ಯದರ್ಶಿ ಶ್ರೀ ಹೆಚ್. ಎನ್. ಸುರೇಶ್‌ರವರಿಂದ ವಂದನಾರ್ಪಣೆಯಾಗಿ, ಸಭೆ ಮುಕ್ತಾಯವಾಯಿತು. ಸಭೆಯ ನಂತರ ರುಚಿರುಚಿಯಾದ ಭೋಜನವೂ ಆಯಿತು.**

**ಗೌ|| ಕಾರ್ಯದರ್ಶಿ**

## *Change of Address*

**Krupa R. L.**
**Geetha Krupa**
**R. K. Phalguna**
**Deepthi P.**

Flat No. 4209, "Pavani", 1st Floor,
Koncept Vijaya Residency,
Nandi Enclave Premises, 2nd Cross,
BSK 3rd Stage, 3rd Phase, 5th Block,
Bhuvaneshwari Nagar, Bangalore - 560 085
Ph : 26996269 (M) 9972597141





## ಸಮಾಚಾರ ಸಂಗ್ರಹ

**ಶಸ್ತ್ರ ಚಿಕಿತ್ಸೆಗೆ ರೋಗಿಯ ಅನುಮತಿ ಕಡ್ಡಾಯ (17 ಜನವರಿ 08) ಪಿಟಿಐ ; ನವದೆಹಲಿ :** ಜೀವಕ್ಕೆ ಅಪಾಯವಿರುವ ಸಂದರ್ಭಗಳನ್ನು ಬಿಟ್ಟರೆ, ಇತರ ಸಂದರ್ಭಗಳಲ್ಲಿ ರೋಗಿಯ ಅನುಮತಿಯಿಲ್ಲದೆ ಶಸ್ತ್ರಕ್ರಿಯೆ ನಡೆಸುವ ಹಾಗಿಲ್ಲವೆಂದು ಸುಪ್ರೀಂ ಕೋರ್ಟ್ ಹೇಳಿದೆ. ಇದರಿಂದಾಗಿ ಒಂದು ಶಸ್ತ್ರಕ್ರಿಯೆಗೆ ವ್ಯಕ್ತಿಯ ಸಂಬಂಧಿಗಳ ಅನುಮತಿಯನ್ನು ಪಡೆದು ಇನ್ಯಾವುದೋ ಅಂಗದ ಶಸ್ತ್ರಕ್ರಿಯೆ ನಡೆಸಲು ವೈದ್ಯರಿಗೆ ಸಾಧ್ಯವಾಗುವುದಿಲ್ಲ. ಎರಡು ಶಸ್ತ್ರಕ್ರಿಯೆ ಮಾಡಬೇಕಾದಲ್ಲಿ ಒಂದು ಶಸ್ತ್ರಕ್ರಿಯೆ ಮಾಡಿದನಂತರ (ರೋಗಿಗೆ ಪ್ರಜ್ಞೆ ಬಂದನಂತರ) ರೋಗಿಗೆ ತಿಳಿಸಿ ಇನ್ನೊಂದು ಶಸ್ತ್ರಕ್ರಿಯೆಗೆ ಕೈ ಹಾಕಬೇಕಾಗುತ್ತದೆ ಎಂದು ಹೇಳಿದೆ. ಎರಡು ಶಸ್ತ್ರಕ್ರಿಯೆಗಳಿಂದಾಗಿ ವ್ಯಕ್ತಿಗೆ ಒಳ್ಳೆಯದಾಗುವುದಾದರೂ ರೋಗಿಗೆ ವಾಸ್ತವದ ಅರಿವನ್ನು ಮನದಟ್ಟು ಮಾಡಿ ಶಸ್ತ್ರಕ್ರಿಯೆಗಳನ್ನು ನಡೆಸಬೇಕು. ಒಂದಕ್ಕೆ ಒಪ್ಪಿಗೆ ಪಡೆದು ಎರಡು ಶಸ್ತ್ರಕ್ರಿಯೆಗಳನ್ನು ಮಾಡಿದರೆ ರೋಗಿಗೆ ಅದು ತಿಳಿದು ಕೋರ್ಟಿಗೆ ಹೋಗಿ ಪರಿಹಾರಕ್ಕೆ ಮನವಿ ಮಾಡುವುದಾದರೆ ಆಸ್ಪತ್ರೆಯು ಪರಿಹಾರವನ್ನು ಕೊಡಲೇಬೇಕಾಗುತ್ತದೆ ಎಂದು ತೀರ್ಪು ನೀಡಿದೆ.

**ಬಾಂಬ್ ಪತ್ತೆಗೆ ರೋಬೋಟ್ (17 ಜನವರಿ 08: ಪಿಟಿಐ) ಬೆಂಗಳೂರು :** ಅಮೇರಿಕಾದ ಮೂಲಕ ಯಾವುದೇ ಸ್ಥಳದಲ್ಲಿ ಆಗಿರಲಿ, ಬಾಂಬುಗಳನ್ನು ಪತ್ತೆ ಮಾಡಿ ಅವುಗಳನ್ನು ''ಮೆತ್ತಗಾಗಿಸುವ'' ಪ್ಯಾಕ್ ಬೋಟ್ ಎನ್ನುವಂತಹ ರೋಬೋಟನ್ನು ಕಂಡುಹಿಡಿಯಲಾಗಿದೆ. ಇದು ರಕ್ಷಣಾ ಇಲಾಖೆಗೆ ತುಂಬಾ ಅಗತ್ಯವಾಗಿದೆ. ಯುದ್ಧ ಪೀಡಿತ ಪ್ರದೇಶವಾಗಿಲ್ಲದಿದ್ದರೂ ಸಹ ಬಾಂಬುಗಳು ಸಿಡಿಯುತ್ತಲೇ ಇವೆ. ಈ ಹಿನ್ನೆಲೆಯಲ್ಲಿ ಪ್ಯಾಕ್ ಬೋಟ್ ಪೋಲೀಸರಿಗೆ ಹಾಗೂ ರಕ್ಷಣಾ ಇಲಾಖೆಯ ಸಿಬ್ಬಂದಿಗೆ ಸಹಕಾರಿಯಾಗಲಿದೆ. ಇಂತಹ ರೋಬೋಟ್‌ಗಳಲ್ಲಿ ವಾಟರ್ ಜೆಟ್‌ಗಳಿರುವುದರಿಂದ, ಬಾಂಬುಗಳ ಮೇಲೆ ನೀರು ಚುಮುಕಿಸುವುದರಿಂದ ಅವುಗಳು ಸಿಡಿಯುವುದಿಲ್ಲ. ಆ ರೋಬೋಟ್‌ಗಳಿಗೆ ಬಾಂಬುಗಳನ್ನು ಎತ್ತಿ ಎಸೆಯುವ ಕೈಗಳೂ ಇವೆ. ಪರ್ವತ ಪ್ರದೇಶಗಳಲ್ಲಿ – ಕಾಡುಗಳಲ್ಲಿ – ಶೀತ – ಉಷ್ಣ – ಮರಳುಗಾಡುಗಳಲ್ಲಿ ರಿಮೋಟ್ ಕಂಟ್ರೋಲ್‌ಗಳಿಂದ ಕೆಲಸ ಮಾಡಿಸಬೇಕಾಗುತ್ತದೆ. ಆ ರೋಬೋಟ್‌ಗಳು ಕಟ್ಟಡಗಳ ಮೆಟ್ಟಿಲುಗಳನ್ನು ಹತ್ತಿ–ಇಳಿಯುತ್ತವೆ! ಇವುಗಳಲ್ಲಿ GPS Receivers ಇರುವುದರಿಂದ Control Room ಬೇಕಾಗುವುದಿಲ್ಲ. 1/2 ಕಿ.ಮೀ.ವರೆಗೆ ಆಡಿಯೋ–ವಿಡಿಯೋ ಸಂದೇಶಗಳನ್ನು ಇವುಗಳ ಮೂಲಕ ಕಳಿಸಬಹುದು. ಅಮೇರಿಕಾ–ಇರಾಕ್–ಆಫ್‌ಘಾನಿಸ್ತಾನಗಳ ರಕ್ಷಣಾ ಇಲಾಖೆಗಳಲ್ಲಿ ಇವುಗಳು ಈಗಾಗಲೇ

ಕೆಲಸ ಮಾಡುತ್ತಿವೆ. ಭಾರತಕ್ಕೂ ಸದ್ಯದಲ್ಲೇ ಬರಲಿವೆ. ವರ್ಷಾಂತ್ಯದ ವೇಳೆಗೆ ಖರೀದಿಸುವ ಪ್ರಯತ್ನ ಮಾಡಲಾಗುತ್ತದೆ. 5 ವರ್ಷಗಳಿಗಂದ ಅಮೇರಿಕಾ ಇಂತಹ ರೋಬೋಟ್‌ಗಳನ್ನು ತಯಾರಿಸುತ್ತಿದೆ ಹಾಗೂ ವ್ಯವಹರಿಸುತ್ತಿದೆ.

**ಕ್ಯಾಲ್ಸಿಯಂನಿಂದ ಹೃದಯಾಘಾತ ! (17 ಜನವರಿ 08 : ಬಿಬಿಸಿ) ಲಂಡನ್ :** ನಿಮಗೆ ಕ್ಯಾಲ್ಸಿಯಂ ಬೇಕೇಬೇಕು ಎಂದು ಹೇಳಿದವರನ್ನು ಏಕೆ ಬೇಕು ಎಂದು ಪ್ರಶ್ನಿಸಬೇಕು ಎಂದು ವೈದ್ಯರು ತಿಳಿಸಿದ್ದಾರೆ. ಮೂಳೆ ಸವೆತವನ್ನು ನಿಲ್ಲಿಸಲು ಹಾಗೂ 50 ವರ್ಷದ ನಂತರದ ನಿತ್ರಾಣಕ್ಕೆಂದು ಮಹಿಳೆಯರಿಗೆ ವೈದ್ಯರು ಕ್ಯಾಲ್ಸಿಯಂ ಮಾತ್ರೆಗಳನ್ನು ನುಂಗಬೇಕೆಂದು ಹೇಳುತ್ತಾರೆ. ಆದರೆ ಆ ಮಾತ್ರೆಗಳು ಹೃದಯಾ ಘಾತವನ್ನುಂಟುಮಾಡಿ ಮೃತ್ಯುವಿಗೆ ತಳ್ಳುತ್ತವೆ ಎಂದು ಎಚ್ಚರಿಸಿದ್ದಾರೆ. 1000 ಎಂಜಿ ಕ್ಯಾಲ್ಸಿಯಂ ಮಾತ್ರೆಗಳನ್ನು ನುಂಗುತ್ತಿರುವ ಹಾಗೂ ಹೃದಯದ ಖಾಯಿಲೆಗಳಿಗೆ ಒಳಗಾಗಿರುವ ನ್ಯೂಜಿಲೆಂಡ್ ಮಹಿಳೆಯ ಡಾಟಾ ನೋಡಿದಾಗ ವೈದ್ಯರು ಇಂತಹ ತೀರ್ಮಾನಕ್ಕೆ ಬಂದಿದ್ದಾರೆ. 55 ವರ್ಷ ವಯಸ್ಸಿನ 1500 ಮಹಿಳೆಯರಿಗೆ ಕ್ಯಾಲ್ಸಿಯಂ ಮಾತ್ರೆಗಳನ್ನು ನೀಡಲಾಯಿತು. 1500 ಮಹಿಳೆಯರಿಗೆ ಪ್ಲೆಸಿ ಬೋಸ್ ಮಾತ್ರೆಗಳನ್ನು ಕೊಡಲಾಯಿತು. ಪ್ಲೆಸಿ ಬೋಸ್ ತೆಗೆದುಕೊಳ್ಳುವ ಮಹಿಳೆಯರಿಗಿಂತ, ಕ್ಯಾಲ್ಸಿಯಂ ತೆಗೆದುಕೊಳ್ಳುವ ಮಹಿಳೆಯರಲ್ಲಿ ಶೇ. 49ರಷ್ಟು ಹೃದಯದ ತೊಂದರೆಗಳು ಕಂಡುಬಂದವು. ಶೇ. 37ರಷ್ಟು ಮಹಿಳೆಯರಿಗೆ ಲಕ್ವಾ ಹೊಡೆಯುವ ಸೂಚನೆಗಳು ಕಂಡುಬಂದವು ಎಂದು ವೈದ್ಯರು ತಿಳಿಸಿದ್ದಾರೆ. ಆದುದರಿಂದ ಮಹಿಳೆಯರು ಹುಷಾರಾಗಿರಬೇಕಾದುದು ಅಗತ್ಯವಾಗಿದೆ ಎಂದು ಹೇಳಿದ್ದಾರೆ.

**ಡಯಾಬಿಟೀಸ್ ಇದ್ದರೆ ಕಾಫಿ ಕುಡಿಯಬಾರದು (29 ಜನವರಿ 08; ಡೈಲಿ ಟೆಲಿಗ್ರಾಫ್) ಲಂಡನ್ :** ಡಯಾಬಿಟೀಸ್ ಇದ್ದವರು ಸಕ್ಕರೆ ಇಲ್ಲದೆ ಏನನ್ನು ಬೇಕಾದರೂ ಹೊಟ್ಟೆಗೆ ಸುರಿದುಕೊಳ್ಳಬಹುದೆಂಬ ಕಲ್ಪನೆ ಈಗ ಸುಳ್ಳಾಗಿದೆ. ಇದನ್ನು ಡ್ಯೂಕ್ ಮೆಡಿಕಲ್ ಸೆಂಟರ್‌ನ ಸಂಶೋಧಕರ ತಂಡ ಹೇಳಿದೆ. ಸಕ್ಕರೆ ಇಲ್ಲದ ಕಾಫಿ ಕುಡಿಯುವ ಅಭ್ಯಾಸವೂ ಗಂಡಾಂತರಕಾರಿಯಾಗಲಿದೆ ಎಂದಿದೆ. ಕಾಫಿಯಿಂದಾಗಿ ರಕ್ತದಲ್ಲಿ ಸಕ್ಕರೆ ಪ್ರಮಾಣವೂ ಹೆಚ್ಚುತ್ತಾ ಹೋಗುವುದನ್ನು ಪತ್ತೆ ಮಾಡಿದೆ. ಡಯಾಬಿಟೀಸ್‌ಗೆ ಕೆಫೀನ್ ಎಂದೂ ಸಹಕಾರಿಯಾಗುವುದಿಲ್ಲ. ಕಾಫಿ-ಟೀಯಂತಹ ಪಾನೀಯಗಳನ್ನು ಬಿಟ್ಟುಬಿಡುವುದೇ ಇದಕ್ಕೆ ಉತ್ತಮ ಪರಿಹಾರವಾಗಲಿದೆ. ಕಾಫಿ ಕುಡಿಯುತ್ತಿರುವವರಿಗೆ 8% ರಷ್ಟು ಸಕ್ಕರೆಯ ಪ್ರಮಾಣ ಹೆಚ್ಚಾಗಿದ್ದನ್ನು ಪತ್ತೆ ಹಚ್ಚಿದೆ. ಬೆಳಗಿನ ಉಪಾಹಾರದ ನಂತರ ಶೇ. 9ರಷ್ಟು ಮಧ್ಯಾಹ್ನದ ನಂತರ ಶೇ. 15ರಷ್ಟು ಹಾಗೂ ರಾತ್ರಿ ಊಟದ ನಂತರ ಶೇ. 20ರಷ್ಟು ಹೆಚ್ಚಾಗಿದ್ದದ್ದನ್ನು ಪತ್ತೆ ಹಚ್ಚಿದೆ.





ಡಯಾಬಿಟೀಸ್ ಇರುವವರು ಕಡ್ಡಾಯವಾಗಿ ಕಾಫೀ-ಟೀ ಬಿಟ್ಟು ಆರೋಗ್ಯದಿಂದಿರಿ ಎಂದು ಸಂಶೋಧನಾ ತಂಡ ಹೇಳಿದೆ.

**ಆಫ್‌ಘನ್ ಮೂಲಕ ಅಮೇರಿಕಾ ಸಮರ (29 ಜನವರಿ 08; ಎಪಿ) ನ್ಯೂಯಾರ್ಕ್:** ಆಫ್‌ಘಾನಿಸ್ತಾನದಲ್ಲಿ ಭಯೋತ್ಪಾದನೆಯನ್ನು ಮಟ್ಟಹಾಕುವ ಪ್ರಯತ್ನದಲ್ಲಿ ಸೋತಿರುವ ಅಮೇರಿಕಾವು ಪಾಕೀಸ್ತಾನದ ನೆಲದಲ್ಲಿ ಮಿಲಿಟರಿಯನ್ನು ಇಟ್ಟು , ಪಾಕಿಸ್ತಾನವನ್ನೂ , ಆಫ್‌ಘಾನಿಸ್ತಾನವನ್ನೂ ಮಟ್ಟಹಾಕಬಹುದೆಂಬ ತಂತ್ರಗಾರಿಕೆಯನ್ನು ಹೂಡುತ್ತಿದೆ. ಪಾಕೀಸ್ತಾನದ ಬುಡಕಟ್ಟು ಪ್ರದೇಶಗಳೇ ಭಯೋತ್ಪಾದಕರ ನೆಲೆಯಾಗಿದ್ದು ಅಲ್ಲಿಂದಲೇ ಅವು ದಾಳಿ ಮುಂದುವರೆಸಿವೆ. ಇರಾನ್ ಹಾಗೂ ಆಫ್‌ಘಾನಿಸ್ತಾನಗಳಿಗಿಂತ ಹೆಚ್ಚಾಗಿ ಪಾಕಿಸ್ತಾನದಲ್ಲಿಯೇ ಇದ್ದಾರೆ. ಹೆಚ್ಚುಹೆಚ್ಚು ಗುಂಪುಗೂಡುತ್ತಿದ್ದಾರೆ. ಹೆಚ್ಚುಹೆಚ್ಚು ಶಸ್ತ್ರಾಸ್ತ್ರಗಳನ್ನು ಸಂಗ್ರಹ ಮಾಡಿ ಇಟ್ಟುಕೊಳ್ಳುತ್ತಿದ್ದಾರೆ.

**ವೇತನ ಏರಿಕೆ: ಭಾರತೀಯರಿಗೆ ಲಾಭ! (29 ಜನವರಿ 08; ಪಿಟಿಐ) ನವದೆಹಲಿ:** ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಭಾರತೀಯರು 2008ರಲ್ಲಿ ಶೇ 14ರಷ್ಟು ಹೆಚ್ಚು ವೇತನ ಪಡೆಯಲಿದ್ದಾರೆ. ಏಕೆಂದರೆ ಅವರು ಕೆಲಸ ಬಿಟ್ಟುಹೋಗಿ ವಿದೇಶಗಳಿಗೆ ಹೋಗಬಹುದೆಂಬ ಭಯದಿಂದ ಕಂಪನಿಗಳು ಇಂತಹ ತಂತ್ರಗಾರಿಕೆಗೆ ಮುಂದಾಗಿದೆ. ಇತರ ದೇಶಗಳಿಗೆ ಹೋಲಿಸಿದರೆ ಭಾರತೀಯರೇ ಅದೃಷ್ಟವಂತರು. ಭಾರತದಲ್ಲಿ ವೇಗವಾಗಿ ಬೆಳವಣಿಗೆಯಾಗುತ್ತಿರುವ ಹಣದುಬ್ಬರದ ಜೊತೆಗೆ ಹಣಕಾಸಿನ ಅಭಿವೃದ್ಧಿಯೂ ಉಳಿಸಿಕೊಳ್ಳಲೇಬೇಕೆಂಬ ಹಟವೂ ಇನ್ನೊಂದು ಕಾರಣ. ಅಮೇರಿಕಾದ ಡಾಲರ್ ಬೆಲೆಯೂ ಕುಸಿಯುತ್ತಿರುವುದರಿಂದ ತಕ್ಷಣ ಕೆಲಸ ಬಿಟ್ಟುಹೋಗಲು ಸಾಧ್ಯವಿಲ್ಲವೆಂಬ ನಿರೀಕ್ಷೆಯೂ ಜೊತೆಗೂಡಿದೆ ! 2007ರಲ್ಲಿ ಭಾರತ 12.6%, ಅರ್ಜೆಂಟೈನಾ 12.7%, ಇಂಡೋನೇಷ್ಯಾ 11.3%, ರಷ್ಯಾದಲ್ಲಿ 11% ಹೆಚ್ಚಳ ಕಂಡಿವೆ. ಭಾರತವೊಂದನ್ನು ಬಿಟ್ಟರೆ ವಿಯೆಟ್ನಾಂ ಮಾತ್ರವೇ 8ರಿಂದ 10% ಹೆಚ್ಚು ಲಾಭ ಪಡೆಯಲಿದೆ. ಚೀನಾ ಮಾತ್ರ ಹೋದವರ್ಷದಷ್ಟನ್ನೇ (8%) ಕೊಡಲಿದೆ. ಈ ವರ್ಷ ಶೇ. 25ರಷ್ಟನ್ನೂ ತಲುಪಬಹುದಾಗಿದೆ ಎಂದು ಹೇಳಲಾಗುವ ಪಟ್ಟಿಯಲ್ಲಿ ಭಾರತ - ಇಂಡೋನೇಷ್ಯಾ - ವಿಯೆಟ್ನಾಂ - ಚೀನಾ - ಫಿಲಿಫೈನ್ಸ್ ಸೇರಿವೆ. ಇದಕ್ಕೆ ತದ್ವಿರುದ್ಧವಾದ ಪರಿಸ್ಥಿತಿ ಯೂರೋಪ್‌ನಲ್ಲಿದೆ. ಸ್ವಿಸ್ - ಜಪಾನ್ - ಜರ್ಮನಿ - ಫ್ರಾನ್ಸ್ - ಆಸ್ಟ್ರಿಯಾ 12% ನೀಡಲಿವೆ. ಅತಿ ಕಡಿಮೆ ಪ್ರಮಾಣವನ್ನು ಅಂದರೆ 5.5% ರಷ್ಟನ್ನು ಸ್ಲೋವೇನಿಯಾ ನೀಡಲಿದೆ ಎಂದು ಇಸಿಎ ಇಂಟರ್‌ನ್ಯಾಷನಲ್ ವರದಿ ಹೇಳಿದೆ.

**ಮಕ್ಕಳು ಹೇಳುವುದನ್ನು ಕೇಳಿ (29 ಜನವರಿ 08; ಎಪಿ) ನ್ಯೂಯಾರ್ಕ್ :** ಮಕ್ಕಳು ಮನೆಯಲ್ಲಿ ಪಾಠ ಓದುತ್ತಿರುವಾಗ ನೀವು ಏನನ್ನೂ ಅವರಿಗೆ ಹೇಳಿಕೊಡಬೇಡಿ. ಅವರು ಏನನ್ನು ಕಲಿಯುತ್ತಿದ್ದಾರೆಂದು ಗಮನವಿಟ್ಟು ಕೇಳಿ. ತಾನು ಹೇಳುತ್ತಿರುವುದನ್ನು ತಾಯಿ ಆಸಕ್ತಿಯಿಂದ ಕೇಳುತ್ತಿದ್ದಾಳೆ ಎಂಬ ಸಂತೋಷದಿಂದ ಮಗು ಇನ್ನಷ್ಟು ಚೆನ್ನಾಗಿ ಓದುತ್ತದೆ ಎಂದು ಬ್ರಿಟನ್‌ನ ವಂಡರ್‌ಬಿಟ್ ವಿಶ್ವವಿದ್ಯಾನಿಲಯದ ವರದಿ ಹೇಳಿದೆ. ಈ ರೀತಿ ಮಾಡುವುದರಿಂದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ತಾವೇ ಪ್ರಯತ್ನ ಮಾಡಲು ಪ್ರೇರಣೆ ನೀಡಿದಂತೆ ಆಗುತ್ತದೆ ಎಂದು ಹೇಳಿದೆ. ಸುಮ್ಮನೆ ಕೇಳುವ ತಾಯಿ ಮಗುವಿನ ಉತ್ತಮ ಕಲಿಕೆಗೆ ಪ್ರೋತ್ಸಾಹದಾಯಕ ವಾತಾವರಣವನ್ನು ನೀಡಬಲ್ಲದು ಎಂದು ವರದಿಯಲ್ಲಿ ಹೇಳಲಾಗಿದೆ.

**ಸಾರ್ವಜನಿಕವಾಗಿ ಸಿಗರೇಟ್ ನಿಷೇಧ (30 ಜನವರಿ 08; ಯುಎನ್ನೈ) ನವದೆಹಲಿ:** ಈ ರೀತಿಯ ಕಾನೂನನ್ನು ಜಾರಿ ಮಾಡಲು ಕೇಂದ್ರ ಆರೋಗ್ಯಮಂತ್ರಿ ಅಂಬುಮಣಿ ರಾಂದಾಸ್ ಯೋಚಿಸುತ್ತಿದ್ದಾರೆ. ಹಾಗಾದರೆ ಸರ್ಕಾರ ಹೇಳಿದ ಜಾಗಗಳಲ್ಲಿ ಮಾತ್ರ ಸಿಗರೇಟ್ ಸೇದಬೇಕಾಗುತ್ತದೆ. ನಮ್ಮ ಜನ ಇದನ್ನು ಒಪ್ಪುತ್ತಾರೆಯೇ? ಇಲ್ಲ, ಹಾಗಾದರೆ ಇದು ಸರ್ಕಾರದ ಅಧಿಕಾರಿಗಳಿಗೆ ಲಂಚ ವಸೂಲಿಗೆ ಇನ್ನೊಂದು ಅವಕಾಶವಾಗುತ್ತದೆ.

– ಬಿ.ಎಸ್. ಸತೀಶ್

## ಗಮನಿಸಿ !!!

**ದಿನಾಂಕ 10.02.2008ರಂದು ಜಯರಾಮ ಸೇವಾ ಮಂಡಲಿಯಲ್ಲಿ ನಡೆದ ತ್ಯಾಗರಾಜ ಆರಾಧನಾ ಸಂದರ್ಭದಲ್ಲಿ ನಮ್ಮ ಒಬ್ಬರು ಕಲಾವಿದರಿಗೆ ಸೇರಿದ ಒಂದು ''ಶ್ರುತಿ ಪೆಟ್ಟಿಗೆ'' ಕಾಣೆಯಾಗಿದೆ. ಯಾರಾದರೂ ಗಮನಿಸಿದ್ದಲ್ಲಿ ದಯವಿಟ್ಟು ಸಂಘವನ್ನು ಸಂಪರ್ಕಿಸಬೇಕಾಗಿ ಕೋರಿದೆ.**

**ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :**

**26767874, 9342880257**





# Know Thyself

Socrates made a profound statement when he said in the humblest way possible that "One thing only I know, and that is I know nothing." To know that we do not know is itself great knowledge. There is no denying the fact that man's steady ascent from stone age to space age is breath taking and mind boggling. Man's technological advance in several fields of human activity speak volumes on human ingenuity. It is indeed an irony that despite such an explosion of human intellect, Man has not been able to find so far plausible answers to certain fundamental questions on life, which continue to baffle all thinking people. We yearn and die to know the answers to questions like, as to who we are, and why and from where and for what purpose have we come to this world. One of the greatest physicists of the present century Stephen Hawking in his popular book "A Brief History Of Time" voices the same question when he states "Today we still yearn to know why we are here and from where we come from". If our entry into this world is shrouded in mystery, our exit from here, too is likewise mysterious. No one can predict the time, place, nature and manner of our departure from this world. We do not know as to where we go from here after our sojourn here ends. Thus we neither know our beginning nor the end. Even during our temporary tenure here, we are not masters of ourselves. Things happen or do not happen according to a

predetermined fashion, over which we have neither knowledge nor control. Thus we are eternally and wholly controlled at every stage of our lives by some unknown supreme power, which we call as God, destiny or karma.

It is interesting to know some little known facts about ourselves, our own body. Deepak Chopra in his book "Quantum Healing" has given some startling little known facts about our own selves. "1). There are 50 trillion cells in an adult body. (Scientists now say the figure is around 10,000 trillion cells- 1 followed by 16 zeroes, more than the total number of stars in a galaxy. 2). The skin renews itself every month.3). There is a new stomach lining every four days. 4). 98% of the atoms in our body were not there a year ago 5). The skeleton was not there three months ago. 6). There is a new liver every 6 weeks.7). Even within the brain, whose cells are not replaced once they die, the content of carbon, nitrogen, oxygen, and so on is totally different today from a year ago. 8) All the separate DNA of every person who has ever lived, would fit comfortably in a tea spoon, and yet if the tightly wound DNA in even a single cell nucleus of our body were uncoiled and the pieces laid end to end, they would stretch out to five feet. This means that the genetic thread contained in the body's 50 trillion cells is 50 billion miles long-enough to reach the moon and back 100,000 times".

There are some more interesting things to know about ourselves. Hundreds and thousands of chemical reactions take





place within us, about which we are completely unaware. Our body is verily a bio-chemical and bio-electrical factory. We generate 0.1 volt of electricity in the cells from the food we take and the oxygen we inhale. Our heart pumps 80001iters of blood every day, 3 million liters in a year. There is a constant but, silent battle raging within us, between our benevolent cells, and the invading pathogens, present all around us, about which we are absolutely unaware. (But it is also true that in some unfortunate people certain cells go awry, attack, damage and ultimately kill their own hosts.) The cells communicate amongst themselves in a language of their own, to keep you and me healthy and in a state of well being. In the process billions of cells sacrifice their lives daily.

There are many dark areas about us which require illumination. We do not know the chemistry of dreams. We do not know quite well the mental processes that are involved in the generation of thought. We do not know how our long term and short term memory operate and how we can recall in a nano second and relive our 60 or 70 year old events vividly.

May be, in generations to come, man will be able to find satisfactory answers to many of the defiant questions concerning you and me.

*- R. G.. Subramanyam*

*With Best Compliments From :*

# H. R. Ravishankar

# and

# Family

**ಸಂಪರ್ಕಿಸಿ :**

ವಧೂ-ವರರ ವಿವರಣೆಗಳಿಗಾಗಿ ನಮ್ಮ ಬಾಂಧವರು ಶ್ರೀಯುತ ಹೆಚ್.ವಿ. ಮುರಳೀಧರ ಅವರನ್ನು ಸಂಪರ್ಕಿಸಬಹುದು.

**ದೂ : 9242803829**

## *Change of Address*

**B. V. Ashok**
**Savithri**
**Jayalakshmi Venkataramaiah**

"Balaji Paradise", No. G5, 92/4, 1st Cross,
B.S.K. 3rd Stage, Kathriguppe,
(Behind Big Bazaar Road)
Bangalore - 560 085
Ph : 26694754





## ಗಣರಾಜ್ಯೋತ್ಸವ

ದಿನಾಂಕ 26.01.2008ರ ಶನಿವಾರ ನಮ್ಮ ಸಂಘದ ವಿದ್ಯಾರ್ಥಿ ನಿಲಯದ ಆವರಣದಲ್ಲಿ ಗಣರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ವಿದ್ಯಾರ್ಥಿ ನಿಲಯದ ವಿದ್ಯಾರ್ಥಿ ಡಾ॥ ಶ್ಯಾಂಪ್ರಸಾದ್ ಅವರು ಧ್ವಜಾರೋಹಣವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ರಾಷ್ಟ್ರಗೀತೆ ಮತ್ತು ವಂದೇ ಮಾತರಂ ಗೀತೆಗಳನ್ನು ಹಾಡಿದರು. ಸಂಘದ ಜಂಟೀ ಕಾರ್ಯದರ್ಶಿಗಳಾದ ಹೆಚ್. ಎನ್. ಸುರೇಶ್ ಮತ್ತು ರವೀಂದ್ರನಾಥ್ ಕಣಗಾಲ್ ಅವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಸಿಹಿಯನ್ನು ಹಂಚಲಾಯಿತು.

## ಕೊಡುಗೆ

ದಿ॥ ಎಸ್. ಆರ್. ಕುಮುದ ಅವರ ಹೆಸರಿನಲ್ಲಿ ಅವರು ಉಪಯೋಗಿಸುತ್ತಿದ್ದ ಪದಾರ್ಥಗಳು ಅಂದರೆ ಒಂದು ಮರದ ಬೀರು, ಒಂದು ಕಬ್ಬಿಣದ ಬೀರು ಮತ್ತು ಒಂದು ಮರದ ಮಂಚ ಹಾಗೂ ಇತರೆ ಉಪಯುಕ್ತ ಪಾತ್ರೆಗಳನ್ನು ಅವರ ಸಂಬಂಧಿಕರು ದಿನಾಂಕ 10.01.2008ರಂದು ಸಂಘಕ್ಕೆ ಕೊಡುಗೆಯಾಗಿ ನೀಡಿರುತ್ತಾರೆ.

ಕೊಡುಗೆ ನೀಡಿದ ಸಂಬಂಧಿಕರಿಗೆ ಸಂಘವು ಆಭಾರಿಯಾಗಿದೆ.

## ಸಂಘದ ಕಛೇರಿಯ ನೂತನ ವಿಳಾಸ

**ಬೆಟ್ಟದಪುರ ಸಂಕೇತಿ ಸಂಘ**
**ನಂ. 81, 12ನೇ ಮುಖ್ಯರಸ್ತೆ,**
**ಬಿ.ಎಸ್.ಕೆ. 2ನೇ ಹಂತ,**
**(ಬಿ.ಎನ್.ಎಂ. ಕಾಲೇಜು ಎದುರು)**
**ಬೆಂಗಳೂರು - 560 070**